ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಚುನಾವಣೆ - ...

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 6-3-2021

# ಚುನಾವಣೆ ಚರ್ಚೆಗೆ ಕೂಡಿ ಬರದ ಕಾಲ

## ಒಂದು ದೇಶ, ಒಂದು ಚುನಾವಣೆಗೆ ಆಕ್ಷೇಪ

ವಿಧಾನಮಂಡಲ: ಒಂದು ರಾಷ್ಟ್ರ ಒಂದು ಚುನಾವಣೆ ಕುರಿತು ಚರ್ಚಿಸುವ ಸಲುವಾಗಿಯೇ ಕರೆಯಲಾಗಿದ್ದ ಎರಡು ದಿನಗಳ ವಿಶೇಷ ಅಧಿವೇಶನ ಚರ್ಚೆಯನ್ನೇ ಕಾಣದೇ ಮುಗಿಯುವಂತಾಯಿತು!

ಹೌದು, ಪ್ರತಿಪಕ್ಷ ಕಾಂಗ್ರೆಸ್ ಹಾಗೂ ಜೆಡಿಎಸ್‌ನ ಪ್ರತಿರೋಧದಿಂದಾಗಿ ಉಭಯ ಸದನಗಳಲ್ಲಿ ವಿಚಾರ ಚರ್ಚೆಯಾಗದೆ ಪ್ರತಿಭಟನೆ, ಗದ್ದಲ, ಆರೋಪ-ಪ್ರತ್ಯಾರೋಪಕ್ಕಷ್ಟೇ ಸೀಮಿತವಾಗಿ ಯಾವುದೇ ನಿರ್ಧಾರಕ್ಕೆ ಬಾರದಂತಾಯಿತು.

ಈ ನಡುವೆ ಕಾಂಗ್ರೆಸ್‌ನ ಮನವೊಲಿಸಿ ಮಾ.31ರವರೆಗೂ ಅಧಿವೇಶನ ನಡೆಯುವುದರಿಂದ ಮತ್ತೆ ಒಂದು ದಿನ ಒಂದು ರಾಷ್ಟ್ರ ಒಂದು ಚುನಾವಣೆ ಚರ್ಚೆಗೆ ನಿಗದಿಪಡಿಸಲು ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಚಿಂತನೆ ನಡೆಸಿದ್ದಾರೆ. ಈ ಪ್ರಯತ್ನ ಎಷ್ಟರ ಮಟ್ಟಿಗೆ ಸಾಕಾರವಾಗಲಿದೆ ಎಂಬುದು ಕಾದು ನೋಡಬೇಕಾಗಿದೆ.

ವಿಧಾನಸಭೆಯಲ್ಲಿ ಒಂದು ರಾಷ್ಟ್ರ ಒಂದು ಚುನಾವಣೆ ವಿಚಾರದ ಬಗೆಗೆ ಸದನದಲ್ಲಿ ಚರ್ಚೆ ವೇಳೆ ಅನುಚಿತ ವರ್ತನೆ ತೋರಿದ ಭದ್ರಾವತಿ ಶಾಸಕ ಬಿ.ಕೆ.ಸಂಗಮೇಶ್ ಅಮಾನತು ವಿಚಾರವು ಕೆರಳಿಸಿದ್ದು ಎರಡೂ ದಿನ ಪ್ರತಿಪಕ್ಷ ಕಾಂಗ್ರೆಸ್ ಸದನ ನಡೆಯಲು ಬಿಡಲಿಲ್ಲ.

ವಿಧಾನಪರಿಷತ್‌ನಲ್ಲಿ ಮೊದಲ ದಿನ ಮಧ್ಯಾಹ್ನದ ವರೆಗೂ ಪ್ರಶ್ನೋತ್ತರ ಕಲಾಪ ನಡೆದು ಮಧ್ಯಾಹ್ನದ ನಂತರ ಒಂದು ರಾಷ್ಟ್ರ ಒಂದು ಚುನಾವಣೆ ಚರ್ಚೆ ಪ್ರಸ್ತಾಪವಾಗಿ ಕಾಂಗ್ರೆಸ್ ಪ್ರತಿಭಟನೆ ನಡೆಸಿದ್ದರಿಂದ ಸದನ ಮುಂದೂಡಿಕೆಯಾಯಿತು. ಶುಕ್ರವಾರ ಬೆಳಗ್ಗೆ ಕಾಂಗ್ರೆಸ್ ಮತ್ತೆ ಪ್ರತಿಭಟನೆ ಮುಂದುವರಿಸಲು ಮುಂದಾದಾಗ ಇಂದಿನ ಕಾರ್ಯಸೂಚಿಯಲ್ಲಿ ಒಂದು ರಾಷ್ಟ್ರ ಒಂದು ಚುನಾವಣೆ ವಿಚಾರವೇ ಇಲ್ಲ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದಾಗ, ವಿವಾದಕ್ಕೆ ತೆರೆ ಬಿತ್ತು. ಪ್ರಶ್ನೋತ್ತರ ಕಲಾಪದ ನಂತರ ಸದನ ಸೋಮವಾರಕ್ಕೆ ಮುಂದೂಡಲಾಗಿದೆ.

ಬೆಂಗಳೂರು: ವಿಧಾನಸಭೆಯಲ್ಲಿ ಶುಕ್ರವಾರ ಸಂಗಮೇಶ್ ಅಮಾನತು ಹಿಂಪಡೆಯಲು ಹಾಗೂ 'ಒಂದು ದೇಶ- ಒಂದು ಚುನಾವಣೆ' ವಿಷಯ ಕುರಿತು ಚರ್ಚೆಗೆ ಅವಕಾಶ ನೀಡಬಾರದು ಎಂದು ಪಟ್ಟು ಹಿಡಿದ ಕಾಂಗ್ರೆಸ್ ಧರಣಿ ಮುಂದುವರಿಸಿತು. ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಎರಡು ಬಾರಿ ಸದನ ಮುಂದೂಡಬೇಕಾಯಿತು.

ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಸಂಗಮೇಶ್ ಅಮಾನತು ಹಿಂಪಡೆಯಬೇಕು. ಅವರ ನಡವಳಿಕೆ ಅನುಚಿತವಾಗಿ ಇದ್ದಿದ್ದಾದರೆ, ಹಿಂದೆ ಗೋಕಾಕ್‌ನಲ್ಲಿ ಶಾಸಕ ಬಟ್ಟೆ ಬಿಚ್ಚಿಕೊಂಡಿದ್ದು ಏನಾಯಿತು? ಸಂಗಮೇಶ್ ನಿನ್ನೆ ಚರ್ಚೆಗೆ ಸದನ ಪ್ರವೇಶಿಸಿ ಗೊತ್ತಿದೆ.



ಸಂಗಮೇಶ್ ಅವರ ವಿರುದ್ಧ ಐಪಿಸಿ ಸೆಕ್ಷನ್ 307ರಡಿ ಪ್ರಕರಣ ದಾಖಲಿಸುವುದರಿಂದ ನೊಂದಿದ್ದಾರೆ. ಹಾಗಾಗಿ ಅಮಾನತುಗೊಳಿಸಿ ರೂಲಿಂಗ್ ನೀಡಿದ್ದರೂ ವಾಪಸ್ ಪಡೆಯಲು ಅವಕಾಶವಿದ್ದು ಹಿಂಪಡೆಯಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಸದಸ್ಯರ ಪ್ರತಿಭಟನೆ ಮುಂದುವರಿದು ಸದನದ ಬಾವಿಯಲ್ಲಿದ್ದ ಕಾಂಗ್ರೆಸ್ ಸದಸ್ಯರು ಘೋಷಣೆ ಕೂಗುತ್ತಿದ್ದ ಬಗ್ಗೆ ಹಲವು ಸಚಿವರು, ಬಿಜೆಪಿ ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು. ಸಚಿವ ಬಸವರಾಜ ಬೊಮ್ಮಾಯಿ, ಬಿಜೆಪಿಯ ಅರಗ ಜ್ಞಾನೇಂದ್ರ, ಬಸನಗೌಡ ಪಾಟೀಲ ಯತ್ನಾಳ್ ಕಾಂಗ್ರೆಸ್ ಸದಸ್ಯರ ನಡೆಯ ಬಗ್ಗೆ ಆಕ್ರೋಶ ಹೊರಹಾಕಿದರು. 'ಒಂದು ದೇಶ- ಒಂದು ಚುನಾವಣೆ' ಬಗ್ಗೆ ಚರ್ಚೆ ಮುಂದುವರಿಯಲಿ. ಹಾಗೆಯೇ ಸಭಾಧ್ಯಕ್ಷರು ಅಮಾನತುಗೊಳಿಸಿರುವ ರೂಲಿಂಗ್ ಹಿಂಪಡೆಯಬಾರದು ಎಂದು ಒತ್ತಾಯಿಸಿದರು.

ಸಿದ್ದರಾಮಯ್ಯ ಅವರು, ಸಂಗಮೇಶ್ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ. ಶಾಸಕರ ಮೇಲೆ ದೌರ್ಜನ್ಯ ನಡೆಸಲಾಗಿದೆ ಎಂದು ಆರೋಪಿಸಿದರು. ಆಗ ಸ್ಪೀಕರ್ ಅವರು ಸ್ಥಳಕ್ಕೆ ಹೋಗಿ ಕುಳಿತುಕೊಳ್ಳುವಂತೆ ಕಾಂಗ್ರೆಸ್ ಸದಸ್ಯರಿಗೆ ಸೂಚಿಸಿದರು. ಆದರೂ ಗದ್ದಲ ನಿಲ್ಲದ ಹಿನ್ನೆಲೆಯಲ್ಲಿ ಮಧ್ಯಾಹ್ನಕ್ಕೆ ಸದನ ಮುಂದೂಡಿದರು. ಆಗಲೂ ಗದ್ದಲ ನಿಲ್ಲದ ಕಾರಣ ಸೋಮವಾರಕ್ಕೆ ಕಲಾಪ ಮುಂದೂಡಲಾಯಿತು.